ದಿನಾಂಕಃ **13.02.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ವೈ ಸಿ ಎಂ ವಕೀಲರಿಂದಃ-

ನಾನು ಆರೋಪಿಗೆ ನೀಡಿದ್ದೇನೆ ಎನ್ನಲಾದ ರೂ. 500 ಹಾಗೂ 100 ರ ಮುಖ ಬೆಲೆಯ ಎಷ್ಟು ನೋಟುಗಳಿದ್ದವು ಎಂದು ಈಗ ನನಗೆ ಹೇಳಲಾಗುವುದಿಲ್ಲ. ನಿಪಿ-7 ರಲ್ಲಿ ಆರೋಪಿಯ ಸಹಿ ಇಲ್ಲಾ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ನೇತ್ರಾ ಎಂದು ಬರೆದಿರುತ್ತದೆ ಎಂದರೆ ಸರಿ. ನೇತ್ರಾ ರವರು ಆರೋಪಿಗೆ ಏನಾಗಬೇಕು ಎಂದು ನನಗೆ ಗೊತ್ತಿಲ್ಲ. ನೇತ್ರಾ ರವರು ಆರೋಪಿಯ ಹೆಂಡತಿಯಾಗಿರಬಹುದು. ನೇತ್ರಾ ರವರು ಆರೋಪಿಗೆ ನೋಟಿಸು ಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲಾ. ನಾನು ಕಳುಹಿಸಿರುವ ನೋಟಿಸು ಆರೋಪಿಗೆ ತಲುಪಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕು ಆರೋಪಿಗೆ ಸೇರಿದ ಖಾತೆಯ ಚೆಕ್ ಎಂದು ದೂರಿನಲ್ಲಿ ನಮೂದಿಸಿರುತ್ತೇನೆ. ನಿಪಿ-1 ರ ಚೆಕ್ಕಿನಲ್ಲಿ ಆರೋಪಿಯ ಖಾತೆಯ ಸಂಖ್ಯೆ ಇರುತ್ತದೆ. ಸಾಕ್ಷಿಯು ಚೆಕ್ ಮೇಲೆ ಸೀಲ್ ಮಾಡಿರುವ ಸಂಖ್ಯೆಯನ್ನು ತೋರಿಸಿರುತ್ತಾರೆ. ನಿಪಿ-1 ರಲ್ಲಿ ಅಕೌಂಟ್ ನಂಬರ್ ಎಂದು ಬರೆದಿರುವ ಜಾಗದಲ್ಲಿ ಯಾವುದೇ ನಂಬರ್ ಇಲ್ಲಾ ಎಂದರೆ ಸರಿ, ಚೆಕ್ಕಿನ ಮೇಲ್ಭಾಗದಲ್ಲಿ ಬರೆದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ ಆರೋಪಿಯ ಹೆಸರಾಗಲೀ ಅಥವಾ ಖಾತಾ ಸಂಖ್ಯೆಯಾಗಲೀ ಇಲ್ಲಾ ಎಂದರೆ ಸರಿ. ನಿಪಿ-2 ಮತ್ತು 3 ರಲ್ಲಿ ಯಾವ ಕಾರಣಕ್ಕಾಗಿ ಚೆಕ್ ಅಮಾನ್ಯಗೊಂಡಿರುತ್ತದೆ ಎಂದು ನಮೂದು ಇಲ್ಲಾ ಎಂದರೆ ಸರಿಯಲ್ಲ. ಸ್ಟೇಟ್ ಬ್ಯಾಂಕ್ ಅಫ್ ಹೈದರಾಬಾದ್ ಬ್ಯಾಂಕಿನಲ್ಲಿ ಆರೋಪಿಯ ಯಾವುದೇ ಖಾತೆ ಇಲ್ಲಾ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ ಆರೋಪಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಯಾವುದೇ ಸಾಲವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕಿನ ಶಾಖಾ ವ್ಯವಸ್ಥಾಪಕರನ್ನು ವಿಚಾರಣೆ ಮಾಡಿಸಲು ನಿಮಗೆ ತೊಂದರೆ ಇಲ್ಲಾ ಎಂದರೆ ಸರಿ. ಆರೋಪಿಗೆ ರೂ. 4.00 ಲಕ್ಷ ಸಾಲ ನೀಡುವಷ್ಟು ಆರ್ಥಿಕ ಸಾಮಾರ್ಥ್ಯ ಇಲ್ಲಾ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಹೇಳಿರುವಂತೆ ಸ್ಟೇಟ್ ಬ್ಯಾಂಕ್ ಅಫ್ ಹೈದರಾಬಾದ್ ಬ್ಯಾಂಕಿನಲ್ಲಿ ಯಾವುದೇ ಖಾತೆ ಹೊಂದಿಲ್ಲ ಮತ್ತು ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಸಹಿ ಆರೋಪಿಯದ್ದಲ್ಲಾ ಎಂದರೆ ಸರಿಯಲ್ಲ. ಯಾವುದೇ ನೋಟಿಸನ್ನು ನಾನು ಆರೋಪಿಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವ ಸಲುವಾಗಿ ಆರೋಪಿ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.